ದಿನಾಂಕಃ 25-11-2024 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ. ಎಂ. ಇ. ಹೆಚ್. ವಕೀಲರಿಂದ

1. ಆರೋಪಿ ನನಗೆ 6 – 7 ವರ್ಷಗಳಿಂದಲೂ ಪರಿಚಯ. ಆರೋಪಿ ಟೌನ್ ನಲ್ಲಿ ಅಂಗಡಿ ಇದ್ದು, ವ್ಯಾಪಾರ ಮಾಡುತ್ತಾರೆ. ಆರೋಪಿ ಪರಿಚಯ ಆದ ನಂತರ ಎಷ್ಟು ವರ್ಷಗಳಿಂದ ಕಾಳು ವ್ಯಾಪಾರ ಮಾಡುತ್ತೀಯಾ ಎಂದು ಕೇಳಿಲ್ಲ. ಆರೋಪಿಯ ಅಂಗಡಿಯನ್ನು ನಾನು ನೋಡಿಲ್ಲ. ಅಂಗಡಿ ಇದೆ ಎಂದು ಆರೋಪಿಯೇ ಹೇಳಿದ್ದರು. ನನಗೆ ಸುಮಾರು 13 ಎಕರೆ ಜಮೀನು ಇದೆ. ಜಮೀನು ನನ್ನ ತಂದೆ, ತಮ್ಮ, ಚಿಕ್ಕಪ್ಪ ಹಾಗೂ ನನ್ನ ಹೆಸರಿಗೆ ಇದೆ. ನನ್ನ ಹೆಸರಿನಲ್ಲಿ 22 ಗುಂಟೆ ಜಮೀನು ಇದೆ. ಸದರಿ ಜಮೀನಿನಲ್ಲಿ ವರ್ಷಕ್ಕೆ ಒಂದೂವರೆ ಲಕ್ಷ ಆದಾಯ ಬರುತ್ತದೆ. ನಮ್ಮ ಕುಟುಂಬದ ಎಲ್ಲಾ ಜಮೀನುಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಸ್ವತಃ ಹೇಳುತ್ತಾರೆ. ನನ್ನ ತಂದೆ ಒಟ್ಟು ಕುಟುಂಬದ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಾರೆ ಎನ್ನುವುದು ಸುಳ್ಳು. ನಮ್ಮ ಜಮೀನುಗಳಿಂದ ವಾರ್ಷಿಕವಾಗಿ ಸುಮಾರು 20 ಲಕ್ಷ ಆದಾಯ ಇದೆ. ನಾನು ಎಲ್ಲಾ ವ್ಯವಹಾರವನ್ನು ನಮ್ಮ ತಂದೆಯ ಗಮನಕ್ಕೆ ತಂದು ಮಾಡುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿ ವ್ಯಾಪಾರ ಮಾಡುತ್ತಿಲ್ಲ, ದಿನಗೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಕೂಲಿ ಬಿಟ್ಟರೆ ಬೇರೆ ಆದಾಯ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಹಣ ಕೊಟ್ಟೆ ಎಂದು ಹೇಳುವ ಸಮಯದಲ್ಲಿ ಆರೋಪಿಗೆ ಎಷ್ಟು ಜಮೀನು ಇದೆ ಏನು ಕೆಲಸ ಮಾಡುತ್ತೀರಾ ಎಂದು ಕೇಳಿಲ್ಲ. ಆತ ವ್ಯವಹಾರ ಮಾಡುತ್ತೇನೆ ಕೈ ಸಾಲ ಮಾಡಿಕೊಂಡಿದ್ದೇನೆ ಎಂದು ಹೇಳಿದ. ದಿನಾಂಕಃ 19-04-2022 ರಂದು ಆರೋಪಿ ನಮ್ಮ ಮನೆಗೆ ಬಂದು ಹಣ ಕೇಳಿದ ನಾನು ಅವತ್ತೇ ಹಣ ಕೊಟ್ಟಿರುತ್ತೇನೆ. ಹಣ ಕೊಡುವ ಸಮಯದಲ್ಲಿ ಕೃಷ್ಣೇಗೌಡ ಮತ್ತು ಪುನೀತ ರವರು ಇದ್ದರು. ಅವರುಗಳು ನನಗೆ ಸಂಬಂಧಿಕರಲ್ಲ ಆರೋಪಿಯೇ ಅವರನ್ನು ಕರೆದುಕೊಂಡು ಬಂದಿದ್ದರು. ನಗದು ಹಣ ಮನೆಯಲ್ಲಿಯೇ ಇತ್ತು. ಆ ಸಮಯದಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಬಾಕಿ ಇತ್ತು ಎಂದು ಗೊತ್ತಿಲ್ಲ. ಕೊಬ್ಬರಿ ಅಂಗಡಿಯವರು ನಗದು ಕೊಟ್ಟಿದ್ದರು ಮನೆಯಲ್ಲಿ ಇಟ್ಟಿದ್ದೆ. ಈ ಬಗ್ಗೆ ದಾಖಲೆ ಇಲ್ಲ. ಕೊಬ್ಬರಿ ಅಂಗಡಿಯ ಹೆಸರು ಹೇಳಲು ಆಗುವುದಿಲ್ಲ. ಸುಮಾರು 10 – 12 ಲಕ್ಷದಷ್ಟು ಕೊಬ್ಬರಿ ಕೊಟ್ಟಿದ್ದೆವು. ತೂಕ ಮಾಡಿದ ನಂತರ ಎಷ್ಟು ಹಣ ಎನ್ನುವ ಬಗ್ಗೆ ಲೆಕ್ಕಾಚಾರ ಮಾಡಿ ನಮಗೆ ದಾಖಲಾತಿ ಕೊಡುತ್ತಾರೆ ಎಂದರೆ ಸರಿಯಲ್ಲ.

3. ಆರೋಪಿ ಚೆಕ್ಕನ್ನು ಸಾಲ ಕೊಟ್ಟ ದಿನವೇ ಕೊಟ್ಟಿರುತ್ತಾರೆ. ನಿಪಿ.1 ನ್ನು ಆರೋಪಿಯೇ ಭರ್ತಿ ಮಾಡಿದರು. ಆರೋಪಿಯು ಅಲ್ಲಿಯೇ ಚೆಕ್ ನ ಮೊತ್ತ ಬರೆದು ಸಹಿ ಹಾಕಿ ಕೊಟ್ಟರು. ನಿಪಿ.1 ನ್ನು ಹಾಜರು ಪಡಿಸುವ ಮೊದಲು ಆರೋಪಿಯನ್ನು ಹಣ ಕೊಡುವಂತೆ ಕೇಳಿದೆ, ಆತ ಚೆಕ್ ಹಾಜರು ಪಡಿಸಿ ಎಂದು ಹೇಳಿದ. ಚೆಕ್ ಬೌನ್ಸ್ ಆದ ನಂತರ ಹಣ ಕೊಡುವಂತೆ ಆರೋಪಿಗೆ ಕೇಳಿರುತ್ತೇನೆ. ನಾನು ನಿಪಿ.1 ನ್ನು ಮಾತ್ರ ಪಡೆದಿದ್ದೆ. ನಾನು ಫಿರ್ಯಾದಿಯಲ್ಲಿ ಹೇಳಿರುವುದು ಆರೋಪಿಯ ವಾಸದ ಮನೆಯ ವಿಳಾಸ. ನಿಪಿ.6 ವಿಚಾರ ತಿಳಿದುಕೊಂಡಿರುತ್ತೇನೆ. ಸತೀಶ್ ಚಂದ್ರ ನನ್ನ ಭಾವ ಎಂದರೆ ನನಗೆ ಗೊತ್ತಿಲ್ಲ. ನನಗೆ ಅಕ್ಕ ಇದ್ದಾರೆ. ಅವರನ್ನು ಅಲ್ಪಹಳ್ಳಿ ಗ್ರಾಮಕ್ಕೆ ವಿವಾಹ ಮಾಡಿದ್ದೇವೆ ಎಂದರೆ ಸರಿ. ನನ್ನ ಭಾವನ ಹೆಸರು ಸತೀಶ್ ಚಂದ್ರ ಬಿನ್ ರಾಮೇಗೌಡ. ನಮ್ಮ ಭಾವನ ಹತ್ತಿರ ಆರೋಪಿ ಹಾಗೂ ಅವರ ತಂದೆ ಹಣಕಾಸಿನ ವ್ಯವಹಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಭಾವ ಮತ್ತು ನನ್ನ ಭಾವ ಒಟ್ಟಿಗೆ ವ್ಯಾಪಾರ ಮಾಡುತ್ತಿದ್ದು, ಹಣಕಾಸಿನ ವ್ಯವಹಾರ ಇತ್ತು ಎಂದರೆ ಗೊತ್ತಿಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ನನ್ನ ಭಾವನಿಗೆ ಚೆಕ್ ಕೊಟ್ಟಿದ್ದರು ಎನ್ನುವುದು ಸುಳ್ಳು. ಆ ಸಮಯದಲ್ಲಿ ಆರೋಪಿ ಸತೀಶ್ ಚಂದ್ರ ರವರ ಹತ್ತಿರ ರೂ. 2 ಲಕ್ಷ ಸಾಲ ಪಡೆದಿದ್ದು ಅದರ ಭದ್ರತೆಗಾಗಿ ನಿಪಿ.1 ಮತ್ತು ಅದರ ನಂತರದ ಕ್ರಮ ಸಂಖ್ಯೆಯ ಚೆಕ್ಕನ್ನು ಅವರಿಗೆ ಆರೋಪಿ ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕನ್ನು ನಾನು ಭರ್ತಿ ಮಾಡಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಿಪಿ.1 ನ್ನು ಸತೀಶ್ ಚಂದ್ರ ರವರಿಗೆ ಕೊಟ್ಟ ಬಗ್ಗೆ ಚೆಕ್ ನ ಕೌಂಟರ್ ಫೈಲ್ ನಲ್ಲಿ ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ನಾನು ನಿಪಿ.1 ನ್ನು ಪಡೆದ ನಂತರ ಯಾವ ವರ್ಷದ ಚೆಕ್ ಎಂದು ವಿಚಾರಿಸಿಲ್ಲ. ಆ ಸಮಯದಲ್ಲಿ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ.1 ನ್ನು ಆರೋಪಿ 2016 ರಲ್ಲಿ ಬ್ಯಾಂಕ್ ನಿಂದ ಪಡೆದುಕೊಂಡಿರುತ್ತಾರೆ ಎಂದರೆ ಇರಬಹುದು. ನಿಪಿ.1 ನ್ನು ಪಡೆಯುವಾಗ ನಾನು ಪರಿಶೀಲನೆ ಮಾಡಿಲ್ಲ. ಆರೋಪಿ ದಿನಗೂಲಿ ಮಾಡುತ್ತಿದ್ದು, ಅವರಿಗೆ ಫಿರ್ಯಾದಿನಲ್ಲಿ ಹೇಳಿರುವಂತೆ ರೂ. 15 ಲಕ್ಷ ಸಾಲ ಪಡೆಯುವ ಅವಶ್ಯಕತೆ ಹಾಗೂ ಸಾಮರ್ಥ್ಯ ಇಲ್ಲ ಹಾಗೂ ಅಷ್ಟು ಹಣ ಅವರು ತೀರಿಸಲು ಅವರಿಗೆ ಯಾವುದೇ ಆದಾಯ ಮೂಲಗಳು ಸಹ ಇಲ್ಲ ಎಂದರೆ ಸರಿಯಲ್ಲ. ನನಗೂ ಕೂಡ ರೂ.15 ಲಕ್ಷ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಖಾತೆಯ ಚೆಕ್ ಬೂಕ್ ನ ಕೌಂಟರ್ ಫೈಲ್ ಎಂದರೆ ಸರಿ. ಸದರಿ ಕೌಂಟರ್ ಫೈಲ್ ನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ನಿಡಿ.1 ರಲ್ಲಿ ಸತೀಶ್ ಚಂದ್ರ ರವರಿಗೆ ನಿಪಿ.1 ನ್ನು ಕೊಟ್ಟ ಬಗ್ಗೆ

ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಅವರು ಬರೆದುಕೊಂಡಿರಬಹುದು. ನನ್ನ ಭಾವ ನನ್ನ ಮೂಲಕ ಈ ಚೆಕ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸುಳ್ಳು. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ, ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 2 ನೇ ಪುಟದಲ್ಲಿ ಆರೋಪಿ ತನ್ನ ಚೆಕ್ ನ್ನು ಬ್ಲಾಕ್ ಮಾಡಿಸಿದ್ದಾರೆಂದು ಹೇಳಿರುತ್ತೇನೆ ಎಂದರೆ ನನಗೆ ಹಣ ಕೊಡಬೇಕಾಗುತ್ತದೆ ಎಂದು ಅವರೇ ಮಾಡಿಸಿರುತ್ತಾರೆ ಎಂದು ಹೇಳಿರುತ್ತೇನೆ. ನಾನು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u>: ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿ: